ಹೊಸದಿಗಂತ 9/1/2018

# ನೇತ್ರಾವತಿ ಕಿನಾರೆಯಲ್ಲಿ ಕರೆ ಮುಹೂರ್ತ

## ಫೆ.24,25ರ ವಿಜಯ-ವಿಕ್ರಮ ಕಂಬಳಕ್ಕೆ ಸಾಗಿದೆ ಭರದ ಸಿದ್ಧತೆ



**ಉಪ್ಪಿನಂಗಡಿ:** ವಿಜಯ-ವಿಕ್ರಮ ಕಂಬಳಕ್ಕಾಗಿ ಹಳೆಗೇಟು ಬಳಿ ನೇತ್ರಾವತಿ ನದಿ ದಡದ ಕಂಬಳ ಕರೆಯಲ್ಲಿ ಭಾನುವಾರ ಕರೆ ಮುಹೂರ್ತ ನಡೆಯಿತು. ಶ್ರೀ ಮಹಾಕಾಳಿ ದೇವಾಲಯದ ಅರ್ಚಕ ರಮಾನಂದ್ ರಾವ್ ಧಾರ್ಮಿಕ ವಿಧಿವಿಧಾನ ನಡೆಸಿದರು.

ಕರೆ ಮುಹೂರ್ತ ನೆರವೇರಿಸಿ ಮಾತನಾಡಿದ ವಿಜಯ-ವಿಕ್ರಮ ಜೋಡುಕರೆ ಕಂಬಳ ಸಮಿತಿ ಅಧ್ಯಕ್ಷ, ಕಂಬಳ ಪರ ಕಾನೂನು ಹೋರಾಟಗಾರ ಅಶೋಕ್ ಕುಮಾರ್ ರೈ ಕೋಡಿಂಬಾಡಿ, ರಾಜ್ಯ ಹಾಗೂ ಕೇಂದ್ರ ಸರಕಾರದ ಸ್ಪಂದನೆಯಿಂದಾಗಿ ಕಳೆದ 2 ವರ್ಷಗಳಿಂದ ಕಂಬಳ ಕ್ರೀಡೆಗಿದ್ದ ಅಡೆತಡೆ ಈ ಬಾರಿ ನಿವಾರಣೆಯಾಗಿದೆ. ಫೆ.24 ಮತ್ತು 25ರಂದು ವಿಜಯ-ವಿಕ್ರಮ ಕಂಬಳವು ನಡೆಯಲಿದ್ದು, ಈ ಬಾರಿ ಕಂಬಳವನ್ನು ಹಲವು ವಿಶಿಷ್ಟತೆಗಳೊಂದಿಗೆ ಸುಮಾರು ಒಂದು ಲಕ್ಷ ಜನರ ಭಾಗೀಧಾರಿಕೆಯೊಂದಿಗೆ ಅದ್ದೂರಿಯಾಗಿ ನಡೆಸಲು >p3

## ಕರೆ ಮುಹೂರ್ತ

ಉದ್ದೇಶಿಸಲಾಗಿದೆ. ಕಂಬಳದಲ್ಲಿ ಸುಮಾರು 150 ಜೊತೆ ಕೋಣಗಳು ಭಾಗವಹಿಸಲಿವೆ. ಕರೆ ಮುಹೂರ್ತದ ಮೂಲಕ ಕರೆ ನಿರ್ಮಾಣದ ಕೆಲಸ ಭಾನುವಾರದಿಂದಲೇ ಪ್ರಾರಂಭಗೊಂಡಿದ್ದು, ಈ ಬಾರಿಯೂ ಕಟ್ಟಡ ಕಾರ್ಮಿಕರ ಸಂಘದವರು ಹಾಗೂ ಸಾರ್ವಜನಿಕರು ಶ್ರಮದಾನದಲ್ಲಿ ನಮ್ಮೊಂದಿಗೆ ಪಾಲ್ಗೊಂಡಿದ್ದಾರೆ. ಕಂಬಳ ಕರೆ ನಿರ್ಮಾಣದ ಕೆಲಸಗಳು ನಡೆದ ಬಳಿಕ, ಕರೆಯಲ್ಲಿ ಕಂಬಳ ಕೋಣಗಳ ಮಾಲಿಕರಿಗೆ ಕುದಿ ಓಡಿಸಲು ಅನುವು ಮಾಡಿಕೊಡಲಾಗುವುದು ಎಂದರು.

ವಿಜಯ ವಿಕ್ರಮ ಜೋಡುಕರೆ ಕಂಬಳ ಸಮಿತಿಯ ಗೌರವಾಧ್ಯಕ್ಷ ಎನ್. ಉಮೇಶ್ ಶೆಣೈ, ಪ್ರಧಾನ ಕಾರ್ಯದರ್ಶಿ ಕೇಶವ ಭಂಡಾರಿ ಕೈಪ ಬೆಳ್ಳಿಪ್ಪಾಡಿ, ಕೋಶಾಧಿಕಾರಿ ಸೀತಾರಾಮ ಶೆಟ್ಟಿ ಹೆಗ್ಡೆಹಿತ್ಲು, ಉಪಾಧ್ಯಕ್ಷ ವಿಠಲ ಶೆಟ್ಟಿ ಕುಲ್ಲೊಟ್ಟು, ಕಾರ್ಯದರ್ಶಿ ಚಂದ್ರಶೇಖರ ಮಡಿವಾಳ, ಪ್ರಮುಖರಾದ ರಾಮಚಂದ್ರ ಮಣಿಯಾಣಿ, ಆದರ್ಶ ಶೆಟ್ಟಿ ಕಜೆಕ್ಕಾರು, ಹರಿಪ್ರಸಾದ್ ಶೆಟ್ಟಿ ಬೊಳ್ಳಾವು, ಮಹಾಲಿಂಗ ಕಜೆಕ್ಕಾರ್, ಹರಿಶ್ಚಂದ್ರ ಆಚಾರ್ಯ, ಕಟ್ಟಡ ಕಾರ್ಮಿಕರ ಸಂಘದ ಮಹಿಳಾ ಘಟಕದ ಭಾರತಿ, ದಾಮಣ್ಣ ಗೌಡ, ಸಾಂತಪ್ಪ ಶೆಟ್ಟಿ, ರವಿ ಮರಿಕೆ ಮತ್ತಿತರರು ಉಪಸ್ಥಿತರಿದ್ದರು.

ಬಳಿಕ ಕಟ್ಟಡ ಕಾರ್ಮಿಕರ ಸಂಘ ಹಾಗೂ ಸಾರ್ವಜನಿಕರಿಂದ ಕಂಬಳ ಕರೆಯಲ್ಲಿ ಶ್ರಮದಾನ ನಡೆಯಿತು. ಹೊಸದಿಗಂತ 9/1/18